**CCE PF**
**CCE PR**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2017

**S. S. L. C. EXAMINATION, MARCH / APRIL, 2017**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 30. 03. 2017 ] ಸಂಕೇತ ಸಂಖ್ಯೆ : **01-K**

Date : 30. 03. 2017 ] CODE No. : **01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

(ಹೊಸ ಪಠ್ಯಕ್ರಮ / **New Syllabus**)

(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / **Private Fresh + Private Repeater**)

[ ಗರಿಷ್ಠ ಅಂಕಗಳು : 125

[ **Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** | |
| | **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು. | |
| 2. | ವಿ.ಕೃ. ಗೋಕಾಕರ ಪ್ರಕಾರ ಗೃಹಸ್ಥಾಶ್ರಮ ಧನ್ಯ ಎಂದು ಹೇಳಿದವರು ಕಾಳಿದಾಸನು ಕಲ್ಪಿಸಿದ ಆರಣ್ಯಕನೆಂಬ ಒಬ್ಬ ಋಷಿ. | |
| 3. | 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು' ಎಂದು ಹೇಳಿದವರು ಸರ್ವಜ್ಞ ಕವಿ. | |
| 4. | ನಾಡ ಭವ್ಯ ಜನರು ಬುಕ್ಕರಾಯನ ಬಳಿ ಭಕ್ತರು ಮಾಡುವ ಅನ್ಯಾಯಗಳನ್ನು ಕುರಿತು ಭಿನ್ನಹ ಮಾಡಿದರು. | |
| 5. | ಧರ್ಮಾಧಿಕರಣರು ಸಾಕ್ಷಿ ಕೇಳಲು ವೃಕ್ಷದ ಬಳಿಗೆ ಹೋದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 6. | ಹಸಿದು ಮಲಗಿದ್ದ ಹುಲಿಯು ವಿಧಿ ನನ್ನ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು. | |
| 7. | ಗಂಗೆಯ ಪೆರ್ಮಗ ಭೀಷ್ಮ. | |
| 8. | ಹಕ್ಕಿಯು ಖಂಡ ಖಂಡಗಳನ್ನು ತೇಲಿಸಿ ಮುಳುಗಿಸಿದೆ. | |
| 9. | ಮಾನವನ ಸ್ವಭಾವವನ್ನು ಬಸವಣ್ಣನವರು ಸೊಣಗನಿಗೆ (ನಾಯಿಗೆ) ಹೋಲಿಸಿದ್ದಾರೆ. | |
| 10. | ಕವಿ ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ಪ್ರತಿಯೊಬ್ಬ ಮನುಷ್ಯನು ಮತಗಳೆಲ್ಲವೂ ಪಥಗಳು ಎಂಬ ಹೊಸ ಎಚ್ಚರದಲ್ಲಿ ಬದುಕಬೇಕಿದೆ ಎಂದಿದ್ದಾರೆ. | |
| 11. | ಕವಿ ಜಿ.ಎಸ್. ಶಿವರುದ್ರಪ್ಪನವರು ಕಲುಷಿತವಾದ ನದೀ ಜಲಗಳಿಗೆ ಮುಂಗಾರಿನ ಮಳೆಯಾಗಬೇಕು ಎಂದಿದ್ದಾರೆ. | |
| 12. | ಅಶ್ವಿನಿದೇವತೆಗಳ ವರಬಲದಿಂದ ಮಾದ್ರಿಯಲ್ಲಿ ಜನಿಸಿದವರು ನಕುಲ ಮತ್ತು ಸಹದೇವರು. | |
| 13. | ಒಡಲು ಅನುಭವಿಸುವ ಸಂಕಟಕೆ ಗಡಿಯೂ ಇಲ್ಲ, ಆಚೆ ಈಚೆಯೂ ಇಲ್ಲ. | |
| 14. | ದು. ಸರಸ್ವತಿಯವರ ಪ್ರಕಾರ ಜೀವ ತೆಗೆದವರು ವೀರಯೋಧರು ಎಂದು ಕರೆಯಲ್ಪಡುತ್ತಾರೆ. | |
| 15. | ಬೇಡನು ಬೀಸಿದ ಬಲೆಗೆ ಮೊದಲು ಸಿಲುಕಿದವರು ಪಾರಿವಾಳದ ಪುಟ್ಟ ಮರಿಗಳು. | |
| 16. | ಸು.ರಂ. ಎಕ್ಕುಂಡಿಯವರ ಪ್ರಕಾರ ವ್ಯಾಮೋಹವನ್ನು ತೊರೆದು ಬಾಳಬೇಕು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ಸಾಧಕನಿಗೆ ಸಮಾಜದಲ್ಲಿ ಯಾವುದೇ ತೊಂದರೆಯಾಗದಂತೆ ಅವನ ಯೋಗಕ್ಷೇಮವನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಎಲ್ಲಾ ಧರ್ಮಗಳು ಹಾಕಿಕೊಟ್ಟ ರತ್ನಪಾಠವಾಗಿದೆ. ಧರ್ಮಶಾಲೆ, ವಿಹಾರಗಳು, ಅನ್ನಛತ್ರಗಳು, ದೇವಸ್ಥಾನಗಳು, ಮಠಗಳೂ ಇವರಿಗಾಗಿಯೇ ಏರ್ಪಟ್ಟಿರುವುದು. ಕೆಲವು ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬಹುದು. | |
| 18. | ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳಾವುವೆಂದರೆ ; ಶ್ರೀ ತಿರುಮಲೆಯ ತಾತಯ್ಯಂಗಳು ಸಮಸ್ತ ರಾಜ್ಯದ ಜೈನರ ಅನುಮತದಂತೆ ಶ್ರವಣ ಬೆಳಗೊಳದಲ್ಲಿ ಶ್ರೀ ವೈಷ್ಣವ ಅಂಗರಕ್ಷೆಗೋಸುಗ ರಾಜ್ಯದೊಳಗುಳ್ಳ ಎಲ್ಲಾ ಜೈನರು ಬಾಗಿಲು ಕಟ್ಟಳೆಯಾಗಿ ಮನೆ ಮನೆಗೆ ವರ್ಷಕ್ಕೆ ಒಂದು ಹಣ ಕೊಟ್ಟು ಹಾಗೆ ಎತ್ತಿದ ಹಣದಲ್ಲಿ ಇಪ್ಪತ್ತು ಆಳುಗಳನ್ನು ಅಂಗರಕ್ಷೆಗಾಗಿ ನೇಮಿಸಿ, ಉಳಿದ ಹಣದಲ್ಲಿ ಜೀರ್ಣಗೊಂಡಿರುವ ಜಿನಾಲಯಗಳಿಗೆ ಸುಣ್ಣ ಬಣ್ಣವನ್ನು ತುಂಬಿಸಿ ಜೀರ್ಣೋದ್ಧಾರ ಕಾರ್ಯಕ್ಕೆ ಮುಂದಾಗುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 19. | ಶ್ರೀ ಬುಕ್ಕರಾಯನು ಹದಿನೆಂಟು ನಾಡಿನ ಶ್ರೀ ವೈಷ್ಣವರ ಕೈಯಲ್ಲಿ ಜೈನಧರ್ಮದವರ ಕೈಯಿಟ್ಟು ವೈಷ್ಣವ ಧರ್ಮಕ್ಕೂ, ಜೈನಧರ್ಮಕ್ಕೂ ದರ್ಶನದ ವಿಚಾರವಾಗಿ ಯಾವುದೇ ಭೇದವಿಲ್ಲ. ಜೈನ ದರ್ಶನಕ್ಕೆ ಪೂರ್ವ ಮರ್ಯಾದೆಯಂತೆ ಪಂಚ ಮಹಾ ವಾದ್ಯಗಳು ಹಾಗೂ ಕಳಸ ಸಮೇತ ಮರ್ಯಾದೆ ಸಲ್ಲಬೇಕು. ಜೈನದರ್ಶನಕ್ಕೆ ಭಕ್ತರಿಂದ ಹಾನಿ ವೃದ್ಧಿಯಾದರೂ ವೈಷ್ಣವ ಹಾನಿ ವೃದ್ಧಿಯೆಂದು ಪಾಲಿಸಬೇಕು. ಈ ಹಿನ್ನೆಲೆಯಲ್ಲಿ ವೈಷ್ಣವರು ಎಲ್ಲಾ ಜೈನ ಬಸದಿಗಳ ಮುಂದೆ ಶಾಸನ ನೆಡಿಸಿ ಅದರಂತೆ ಪಾಲಿಸಬೇಕೆಂದು ಬುಕ್ಕರಾಯನು ಜೈನ ಮತ್ತು ವೈಷ್ಣವರ ನಡುವಿನ ಸಂವಾದವನ್ನು ಪರಿಹರಿಸುತ್ತಾನೆ. | |
| 20. | ವಚನ ಧರ್ಮದ ಬಗೆಗೆ ದೇವನೂರರ ಅಭಿಪ್ರಾಯ; 'ಬುದ್ಧನ ಸಹಸ್ರಮಾನದ ನಂತರ ನನಗೆ ಈ ಸಹಸ್ರಮಾನದಲ್ಲಿ ಕಾಣುವುದು ಹನ್ನೆರಡನೆಯ ಶತಮಾನದ ವಚನ ಆಂದೋಲನದ ಆ ಇಪ್ಪತ್ತೈದು ವರ್ಷಗಳು. ಹುಡುಕಿದರೂ ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲೂ ಸಿಗುವುದಿಲ್ಲವೇನೋ! ಈ ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದೇನೋ. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ. | |
| 21. | ದುಷ್ಟಬುದ್ಧಿಯು ತನ್ನ ತಂದೆಯನ್ನು ಕೈಹಿಡಿದು ಕರೆದುಕೊಂಡು ಹೋಗಿ ಏಕಾಂತದಲ್ಲಿ ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ, ನಿಮ್ಮ ಒಂದು ಮಾತಿನಿಂದ ನಮ್ಮ ತೊಂದರೆಯೆಲ್ಲವೂ ಪರಿಹಾರವಾಗಿ ಹಸಿವಿಲ್ಲದೆ ತಿಂದುಂಡು ಸಂತೋಷವಾಗಿರಬಹುದು. ನೀವು ಆ ವೃಕ್ಷದಲ್ಲಿ ಅಡಗಿ ಕುಳಿತು ಧರ್ಮಬುದ್ಧಿಯೇ ಹೊನ್ನನೆಲ್ಲ ಕದ್ದನೆಂದು ಹೇಳಬೇಕೆಂದು ತಾಕೀತು ಮಾಡಿದನು. | |
| 22. | ಧರ್ಮಬುದ್ಧಿಯೇ ಧನವನ್ನು ಕದ್ದನೆಂದು ವೃಕ್ಷವು ಸಾಕ್ಷಿ ಹೇಳಿದಾಗ, ಧರ್ಮಬುದ್ಧಿಗೆ ಆಶ್ಚರ್ಯವಾಗಿ, ದೈವವಾಗಿದ್ದರೆ, ಸತ್ಯವನ್ನೇ ನುಡಿಯಬೇಕಾಗಿತ್ತು ಎಂದು ಬಗೆದು ಕುತೂಹಲಗೊಂಡು ಮರವನ್ನು ಸುತ್ತಿ ನೋಡಿದಾಗ ಮನುಷ್ಯ ಸಂಚಾರವಾಗಿರುವುದು ಕಂಡುಬಂದು, ಹಣದ ಆಸೆಯಿಂದ ಧರ್ಮಬುದ್ಧಿ ಅಧರ್ಮಬುದ್ಧಿಯಾದೆ, ವಂಚಿಸಿದ ಹಣವನ್ನೆಲ್ಲ ಈ ಮರದ ಪೊಟರೆಯಲ್ಲಿಟ್ಟು, ಮತ್ತೆ ಅದನ್ನು ತೆಗೆದುಕೊಳ್ಳಬೇಕೆನ್ನುವಾಗ ಹಣದ ಗಂಟನ್ನು ಹಾವೊಂದು ಸುತ್ತಿಕೊಂಡಿತ್ತು. ಈಗ ಆ ಹಾವನ್ನು ಓಡಿಸಿ ಧನವನ್ನು ತೆಗೆದುಕೊಡುತ್ತೇನೆಂದು ಪೊಟರೆಗೆ ಬೆಂಕಿ ಹಾಕಿಸಲು, ದುಷ್ಟಬುದ್ಧಿಯ ತಂದೆ ಕಂಠಗತ ಪ್ರಾಣನಾಗಿ ಹೊರಬೀಳುತ್ತಾನೆ ಹೀಗೆ ಧರ್ಮಬುದ್ಧಿಯು ದುಷ್ಟಬುದ್ಧಿಯ ತಂತ್ರವನ್ನು ಬಯಲಿಗೆಳೆಯುತ್ತಾನೆ. | |
| 23. | ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣ;<br>ಸದ್ವಂಶದಲ್ಲಿ ಹುಟ್ಟಿದ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಬಿಟ್ಟ ಹುಲಿಯ ಮೊಮ್ಮಗನಾದುದರಿಂದಲೂ, ಶ್ರೀರಾಮ ಹುಟ್ಟಿದ ಭರತಖಂಡದಲ್ಲಿ ಮತ್ತು ಭಗವದ್ಗೀತೆ ಹುಟ್ಟಿದ ಈ ಪವಿತ್ರ ನೆಲದಲ್ಲಿ ಹುಟ್ಟಿದ ಯಾವುದೇ ಹುಲಿಯು ಅಧರ್ಮಕ್ಕೆ ಕೈ ಹಾಕುವುದಿಲ್ಲ ಎಂಬ ಆದರ್ಶವನ್ನಿಟ್ಟುಕೊಂಡು ಹುಲಿಯು ಹಿಂದಿನಿಂದ ಹಾರಿ ಕೊಲ್ಲಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಖಿರ್ದಿ ಪುಸ್ತಕವನ್ನು ಕುರಿತು ಲೇಖಕರು ಹೀಗೆ ಹೇಳುತ್ತಾರೆ;<br>ಖಿರ್ದಿ ಪುಸ್ತಕ ಶಾನುಭೋಗರಿಗೆ ಕೇವಲ ಜೀವನದ ಆಧಾರವಲ್ಲ. ಅವರ ರಾಜಭಕ್ತಿಯ ಲಾಂಛನ. ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ಪ್ರಾಣವನ್ನು ಕಾಪಾಡಿದ ಪುಸ್ತಕದ ಬಗ್ಗೆ ಶಾನುಭೋಗರಿಗೆ ಮತ್ತು ಅವರ ಮನೆತನದವರಿಗೆ ಅಪಾರ ವಾತ್ಸಲ್ಯ ಹಾಗೂ ಕೃತಜ್ಞತೆಯಿದೆ. ಶಾನುಭೋಗರು ಈಗ ಇಲ್ಲ ಆದರೆ ಖಿರ್ದಿ ಪುಸ್ತಕ ದೇವರಮನೆಯ ಮಂದಾಸನದ ಮೇಲೆ ಮಂಡಿಸಿ ಪೂಜೆಗೊಳ್ಳುತ್ತಿದೆ. ಆ ಮನೆಯವರೆಲ್ಲರ ಕೃತಜ್ಞತೆಯಿದೆ. ನಿಜವಾಗಿ ನೋಡಿದರೆ ಶಾನುಭೋಗರ ಪ್ರಾಣ ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ ಹುಲಿಯ ಧರ್ಮ ಶ್ರದ್ಧೆಯಿಂದ ಎಂದಿದ್ದಾರೆ. | |
| 25. | ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ದೇಶದ ಆಡಳಿತ ಸೂತ್ರವನ್ನು ಹಿಡಿಯುತ್ತಾರೆ. ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಹುಕುಮ್ಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುದ್ಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಹುಕುಮ್ಮನ್ನು ವಿರೋಧಿಸಿ, ಶಸ್ತ್ರಾಸ್ತ್ರಗಳನ್ನು ಒಪ್ಪಿಸದೆ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದರು. | |
| 26. | ಸತಿಪತಿಗಳೊಂದಾದ ಭಕ್ತಿ ಶಿವನಿಗೆ ಹಿತವೆನಿಸುತ್ತದೆ ಸತಿಪತಿಗಳೊಂದಾಗದವನ ಭಕ್ತಿ ಅಮೃತದಲ್ಲಿ ವಿಷಬೆರೆತಂತೆ ವ್ಯರ್ಥವೆನಿಸುತ್ತದೆ. ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದರೂ ಅವನು ಪಟ್ಟಣದಲ್ಲಿದ್ದಂತೆ ಅನುಭವಿಸುತ್ತಾನೆ. ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅವನಿಗೆ ಅದು ನಟ್ಟಡವಿಯೆನಿಸುತ್ತದೆ ಎಂದು ಜೇಡರ ದಾಸಿಮಯ್ಯನವರು ಅಭಿಪ್ರಾಯಿಸಿದ್ದಾರೆ. | |
| 27. | ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಬಂದ ಅಶ್ವಮೇಧಯಾಗದ ಕುದುರೆಯನ್ನು ವೀರ ಲವನು ತನ್ನ ಉತ್ತರೀಯದಿಂದ ಕುದುರೆಯ ಕೊರಳನ್ನು ಬಿಗಿದು ಬಳಿಯಲ್ಲಿದ್ದ ಬಾಳೆ ಗಿಡಕ್ಕೆ ಕಟ್ಟುತ್ತಾನೆ. ಇದನ್ನು ಕಂಡ ಮುನಿಸುತರು ಭಯದಿಂದ ನಡುಗುತ್ತ "ಬೇಡ ಬೇಡ ಇದು ಅರಸರ ಯಜ್ಞದ ಕುದುರೆ ಬಿಟ್ಟು ಬಿಡು ಬಿಡದಿದ್ದರೆ ನಮ್ಮನ್ನು ಬಡಿಯುತ್ತಾರೆ" ಎನ್ನುತ್ತಾರೆ. ಈ ಮಾತಿಗೆ ನಗುತ ಲವನು "ಪಾರ್ವರ ಮಕ್ಕಳು ಅಂಜಿದರೆ ಜಾನಕಿಯ ಮಗನಾದ ನಾನು ಅಂಜುವುದಿಲ್ಲ; ಬೆದರುವುದಿಲ್ಲ ಹೋಗಿ ನೀವು" ಎಂದು ಶೌರ್ಯದಿಂದ ಬಿಲ್ದಿರುವ ನೇರಿಸಿ ಜೇವೊಡೆದು ಯುದ್ಧಕ್ಕೆ ಸಿದ್ಧನಾಗಿ ನಿಂತನು. | |
| 28. | 'ನನ್ನಾಸೆ' ಕವನದಲ್ಲಿ ಕವಯಿತ್ರಿ ಇಂದುಮತಿ ಲಮಾಣಿಯವರು ನಿಸ್ವಾರ್ಥ, ತ್ಯಾಗಜೀವನದ ಆದರ್ಶವನ್ನು ಪ್ರಸ್ತುತಪಡಿಸುತ್ತ ದಾಹಗೊಂಡವರ ತನುವ ತಣಿಸುವ, ಸದಾ ಚಿಮ್ಮುತ್ತಿರುವ ಚಿಲುಮೆ ನಾನಾಗಬೇಕೆಂದಿದ್ದಾರೆ. ಹಾಗೂ ಇಳಿ ವಯಸ್ಸಿನಲ್ಲಿ (ಮುಸ್ಸಂಜೆಯ ಹೊಸ್ತಿಲಲಿ) ದಿಕ್ಕಿಲ್ಲದೆ ನರಳಾಡುವ ದೀನರ ಪಾಲಿಗೆ ಊರು ಗೋಲಾಗಬೇಕೆಂದು ಆಸೆಪಡುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ವಿಜ್ಞಾನಿಯೊಬ್ಬನ ವಸ್ತುಸ್ಥಿರತೆಯ ವಿಶ್ವನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲವೆಂದರೆ ಅದು ಶತಮೂರ್ಖತನ. ಕೈಗಡಿಯಾರವೊಂದು ಶೂನ್ಯದಲ್ಲಿ ಸೃಷ್ಟಿಯಾಗುತ್ತದೆ ಎನ್ನುವುದು ಮೂರ್ಖತನದ ಪರಮಾವಧಿ ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಅವನನ್ನು ಕ್ಷಮಿಸಬಹುದು. ಆದರೆ ವಿದ್ಯಾವಂತರು ಸಹ ಈ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಶೋಚನೀಯ. ಇದು ನಿಜವಾದರೆ ವೈಜ್ಞಾನಿಕ ಸಂಶೋಧನೆಗಳು ಅರ್ಥರಹಿತವಾಗುತ್ತದೆ. | |
| 30. | ಲೇಖಕಿ ಆರ್. ನಿರ್ಮಲ ತಮ್ಮ ಹೆಸರಿನ ನಾಮಫಲಕ ಬರೆಸಲು ಆಸೆ ಪಟ್ಟವರಲ್ಲ. ಏಕೆಂದರೆ, ಆ ಮನೆಯಲ್ಲಿ ಅತ್ತೆಯವರ ನಾಮಫಲಕವೇ ಇರಲಿಲ್ಲವೆಂದ ಮೇಲೆ ಮುದ್ದಿನ ಸೊಸೆಗೆ ನಾಮಫಲಕದ ಅಗತ್ಯವಿಲ್ಲ. ಅವರ ಅಪ್ಪ ಹಾಗೂ ಅವರ ಮಾವ ಕಟ್ಟಿಸಿದ ಮನೆಯಲ್ಲೂ ನಾಮಫಲಕವಿರಲಿಲ್ಲ. ಹಿಂದಿನ ತಲೆಮಾರಿನವರು (ಶ್ರೀ ಸಾಮಾನ್ಯರು) ಬದುಕಲು ಸೂರನ್ನು ಬಯಸಿದ್ದರೇ ವಿನಃ ನಾಮಫಲಕವನ್ನು ಬಯಸಿದವರಲ್ಲ ಈ ಕಾರಣಗಳಿಂದಾಗಿ ನಿರ್ಮಲರವರು ನಾಮಫಲಕವನ್ನು ಬರೆಸಲು ಬಯಸಲಿಲ್ಲ. | |
| 31. | ರಾಜಕೀಯ ಸ್ವಾತಂತ್ರ್ಯವೆನ್ನುವುದು ಮಾನವನ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವ. ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ ಸಾರ್ವಜನಿಕ ಹಾಗೂ ಖಾಸಗಿ ಜೀವನದಲ್ಲಿ ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಶಾಸನಗಳನ್ನು ರಚಿಸುವ, ಸರ್ಕಾರಗಳನ್ನು ಸ್ಥಾಪಿಸುವ, ವಿಸರ್ಜಿಸುವ ಹಕ್ಕು ಮತ್ತು ಜನರಿಗೆ ಜೀವನ ಸ್ವಾತಂತ್ರ್ಯ ಸಂತೋಷಾನ್ವೇಷನೆಗಳನ್ನು ಒದಗಿಸಿ ಕೊಡುವ ಕರ್ತವ್ಯವನ್ನು ಹೊಂದಿರುತ್ತದೆ. | |
| 32. | 'ತಲೆಕೂದಲು' ಎಂಬ ಉತ್ತರ ಬರಲು ಹೇಳಿರುವ ಒಗಟು<br>ಹಸಿಹಸಿಯ ಬೀಳೆ ಮಸಿಯ ಬಣ್ಣದ ಬೀಳೆ<br>ಬಿಸಿನೀರ ಹಾಕಿ ಸಲಗುವಿ – ಅಂಬಲ್‌ಹಾಡು<br>ಜಾಣೆ ಕನ್ನಡವ ತಿಳಿದ್ದೇಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯ | 1 ಅಂಕ |
| | ಸಂದರ್ಭ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"<br>ಪ್ರಸ್ತುತ ಹೇಳಿಕೆಯನ್ನು ಡಿ.ಎಸ್. ಜಯಪ್ಪಗೌಡರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಸಂಶೋಧನಾ ಗ್ರಂಥದಿಂದ ಆಯ್ದ 'ಭಾಗ್ಯ ಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅನ್ವೇಷಣೆ ಮಾಡಿ ಯಶಸ್ವಿಯಾಗಿ ಅಳವಡಿಸಿದ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.<br>ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯದಕ್ಷತೆ, ಸಂಶೋಧನಾಮತಿ ಪ್ರಗತಿಪರ ಕಾಳಜಿಯನ್ನು ಮೇಲಿನ ವಾಕ್ಯವು ಸ್ವಾರಸ್ಯಪೂರ್ಣವಾಗಿ ಪ್ರತಿಬಿಂಬಿಸುತ್ತದೆ. | |
| 34. | "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"<br>ಪ್ರಸ್ತುತ ಹೇಳಿಕೆಯನ್ನು ಡಿ.ಎಸ್. ಜಯಪ್ಪಗೌಡರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಸಂಶೋಧನಾ ಗ್ರಂಥದಿಂದ ಆಯ್ದ 'ಭಾಗ್ಯ ಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ವಿಶ್ವೇಶ್ವರಯ್ಯನವರು ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ ಮತ್ತು ಸಂಜೀವಿನಿ ಎಂಬುದನ್ನರಿತು ವಿವಿಧ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿದರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ನಿಯಂತ್ರಣವನ್ನು ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಿಸಿ ಸಂಸ್ಥಾನವೇ ವಹಿಸಿಕೊಳ್ಳುವಂತೆ ಅಂತಿಮ ಪರೀಕ್ಷೆಗಳನ್ನು ನಡೆಸುವಂತೆ ಯೋಜನೆಗಳನ್ನು ರೂಪಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಹಾಗೂ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಉಲ್ಲೇಖಿಸುತ್ತಾರೆ.<br>ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿಗಾಗಿ ಮಹಿಳಾ ಶಿಕ್ಷಣ ಮತ್ತು ವೃತ್ತಿ ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರಿಗಿದ್ದ ದೂರದೃಷ್ಟಿ ಮತ್ತು ವಿಶೇಷ ಆಸಕ್ತಿಯನ್ನು ಈ ವಾಕ್ಯವು ಸ್ವಾರಸ್ಯ ಪೂರ್ಣವಾಗಿ ಪ್ರತಿನಿಧಿಸುತ್ತದೆ. | |
| 35. | "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"<br>ಪ್ರಸ್ತುತ ಹೇಳಿಕೆಯನ್ನು 'ದೇವನೂರ ಮಹಾದೇವ'ರವರು ವಿರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಬಿಡಿ ಲೇಖನಗಳ ಸಂಕಲನದಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಮ್ಮೆ ದಲಿತ ಕವಿ ಸಿದ್ದಲಿಂಗಯ್ಯನವರು ಹೇಳಿದ ಮನೆ ಮಂಚಮ್ಮನ ಕಥೆಯಲ್ಲಿ ಮನೆ ಮಂಚಮ್ಮನೆಂಬ ಗ್ರಾಮದೇವತೆಗೆ ಗ್ರಾಮಸ್ಥರೆಲ್ಲ ಸೇರಿ ಗುಡಿಯೊಂದನ್ನು ಕಟ್ಟಲು ಆರಂಭಿಸುತ್ತಾರೆ. ಹೀಗೆ ಗುಡಿಯನ್ನು ಕಟ್ಟುವ ಸಂದರ್ಭದಲ್ಲಿ ಅದು ಚಾವಣಿಯ ಹಂತಕ್ಕೆ ಬಂದಾಗ ಒಬ್ಬನ ಮೇಲೆ ಆ ದೇವತೆ ಆವಾಹನೆಗೊಂಡು ಈ ಮಾತನ್ನು ಜನರಿಗೆ ಹೇಳುತ್ತಾರೆ. | |
| | ಜನ ಸಾಮಾನ್ಯರಿಗೆ ಮನೆ ಇಲ್ಲದಿರುವಾಗ ನನಗೇಕೆ ಮನೆ ಎಂಬ ಭಾವನೆಯು, ಮನೆ ಮಂಚಮ್ಮನ ಸಮತೆ ಮತ್ತು ಕಾರುಣ್ಯ ತುಂಬಿದ ಹೃದಯ ಶ್ರೀಮಂತಿಕೆ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ. | |
| 36. | "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು" | |
| | ಪ್ರಸ್ತುತ ಹೇಳಿಕೆಯನ್ನು ಡಾ. ಬಿ.ಎಸ್. ಗದ್ದಗಿಮಠ ಅವರ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಹುಕುಮ್ಮನ್ನು ಹೊರಡಿಸಿದರು. ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರ ಹೊಂದುವಂತಿರಲಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು. ಹಲಗಲಿಯ ವೀರರು ಆಯುಧಗಳನ್ನು ಒಪ್ಪಿಸಲೊಲ್ಲದೆ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ದಂಗೆ ಎದ್ದು ಅಧಿಕಾರಿಯನ್ನೇ ಕೊಲೆಗೈದರು. ಇದರಿಂದ ಕ್ರೋಧಗೊಂಡ 'ಕಾರ' ಸಾಹೇಬ ಹಲಗಲಿಗೆ ಮುತ್ತಿಗೆ ಹಾಕಿಸಿ ಧ್ವಂಸ ಮಾಡಿ ಎಳ್ಳಷ್ಟು ಗುರುತು ಉಳಿಯದಂತೆ ನಾಮಾವಶೇಷ ಮಾಡಿದ ಸಂದರ್ಭವನ್ನು ಕಥಾನಕವಾಗಿ ವರ್ಣಿಸುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳುತ್ತಾನೆ. | |
| | ಬ್ರಿಟಿಷ್ ಅಧಿಕಾರಿಗಳ ದರ್ಪ, ದೌರ್ಜನ್ಯ, ತಿರುಗಿ ಬಿದ್ದವರ ಮೇಲೆ ಕೈಗೊಂಡಕ್ರಮ, ಅದನ್ನು ವಿರೋಧಿಸಿದ ಹಲಗಲಿ ವೀರರ ಕೆಚ್ಚೆದೆಯ ಪ್ರತಿಭಟನೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 37. | "ಹೊಸ ಭರವಸೆಗಳ ಕಟ್ಟೋಣ" | |
| | ಪ್ರಸ್ತುತ ಹೇಳಿಕೆಯನ್ನು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ವಿರಚಿಸಿದ 'ಎದೆ ತುಂಬಿ ಹಾಡಿದೆನು' ಎಂಬ ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ. | |
| | ಹಿಂದೆ ಗುರುವಿದ್ದ ಮುಂದೆ ಗುರಿಯಿತ್ತು; ಸಾಗುತಲಿತ್ತು ಧೀರರ ದಂಡು ಎಂಬ ವಾಕ್ಯವು, ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿರಬೇಕು ಎಂಬುದನ್ನು ತಿಳಿಸುತ್ತದೆ. ಜೀವನದಲ್ಲಿ ಧನಾತ್ಮಕ ಭಾವನೆಯನ್ನು ಹೊಂದಿರಬೇಕು ಯಾವುದೇ ರೀತಿಯ ಸವಾಲುಗಳು ಎದುರಾಗಲು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಕ್ರಿಯಾಶೀಲರಾಗಿ ದುಡಿದಾಗ ಯಶಸ್ಸು ಲಭಿಸುತ್ತದೆ. ಜೀವನದಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಸೋಲಬಹುದು. ಮುಗ್ಗರಿಸಿ ಬೀಳಬಹುದು ಅದಕ್ಕಾಗಿ ಧೃತಿಗೆಟ್ಟು ಕುಳಿತುಕೊಳ್ಳದೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆತ್ಮವಿಶ್ವಾಸದಿಂದ, ವೈಚಾರಿಕತೆಯಿಂದ ಭರವಸೆಯನ್ನು ಕಟ್ಟಿಕೊಳ್ಳುತ್ತ ಮೇಲೆದ್ದು ನಿಲ್ಲಬೇಕು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.<br>ಸತತ ಪ್ರಯತ್ನ ಧೃತಿಗೆಡದ ಆತ್ಮವಿಶ್ವಾಸ, ಪರಿಶ್ರಮದ ಮೂಲಕ, ಹೊಸ ಭರವಸೆಗಳ ಜೀವನವನ್ನು ಸ್ವಸ್ಥಗೊಳಿಸಿಕೊಳ್ಳಬೇಕೆಂಬುದನ್ನು ಪ್ರಸ್ತುತ ಹೇಳಿಕೆ ಸ್ವಾರಸ್ಯಪೂರ್ಣವಾಗಿ ನಿರೂಪಿಸುತ್ತದೆ. | |
| 38. | "ಹಲವು ಕೊಂಬೆಗೆ ಹಾಯುತಲಿದೆ"<br>ಪ್ರಸ್ತುತ ಹೇಳಿಕೆಯನ್ನು ಸಂ.ಶಿ. ಭೂಸನೂರ ಮಠ ಅವರು ಸಂಪಾದಿಸಿರುವ 'ವಚನ ಸಾಹಿತ್ಯ ಸಂಗ್ರಹ' ಎಂಬ ಗ್ರಂಥದಿಂದ ಆಯ್ದ 'ವಚನ ಸೌರಭ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಮನಸ್ಸು ಮರ್ಕಟನಂತೆ (ಕೋತಿಯಂತೆ) ಚಂಚಲಯುತವಾದುದು. ಒಂದೆಡೆ ನಿಲ್ಲುವುದಿಲ್ಲ ಹಲವು ಕೊಂಬೆಗೆ ಹಾಯುತಲಿದೆ ವಿಷಯಾದಿಗಳಲ್ಲಿ ಸದಾ ರಮಿಸುತ್ತದೆ. ಇಂತಹ ಮನಸ್ಸನ್ನು (ಬೆಂದ) ನಾನು ಹೇಗೆ ನಂಬಲಿ, ನಚ್ಚಲಿ ನನ್ನ ತಂದೆ ಕೂಡಲ ಸಂಗಮ ದೇವನಲ್ಲಿ ಹೋಗಲು ಬಿಡದು ಎಂದು ಮನಸ್ಸಿನ ಚಂಚಲತೆಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಬಸವಣ್ಣನವರು ಹೇಳುತ್ತಾರೆ.<br>ಲೌಕಿಕ ಅಥವಾ ಅಲೌಕಿಕ ಸಾಧನೆಗೆ ಮನಸ್ಸೇ ಮೂಲ ಚಂಚಲವಾದ ಮನಸ್ಸನ್ನು ಒಂದೆಡೆ ನೆಲೆನಿಲ್ಲಿಸಬೇಕು. ಇಂತಹ ಮನದ ಮೇಲೆ ಹಿಡಿತ ಸಾಧಿಸುವುದೇ ನಿಜವಾದ ಸಾಧನೆ ಎಂಬ ಬಸವಣ್ಣನವರ ಮನದ ಮಾತು ಸ್ವಾರಸ್ಯಪೂರ್ಣವಾಗಿದೆ. | |
| | **ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಪು.ತಿ. ನರಸಿಂಹಾಚಾರ್ಯ :<br>ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯರವರು ೧೯೦೫ ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಕನ್ನಡ ವಿಶ್ವಕೋಶದ ಭಾಷಾಂತರಕಾರರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟು ಸಂಪಾದಕರಾಗಿ ಸೇವೆಸಲ್ಲಿಸಿದ್ದಾರೆ. ಇವರು ಅಹಲ್ಯೆ, ಶಬರಿ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀ ಹರಿಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು. ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಶ್ರೀ ಹರಿಚರಿತೆ' ಕಾವ್ಯಕೃತಿಗೆ 'ಪಂಪ ಪ್ರಶಸ್ತಿ' ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. ಚಿಕ್ಕಮಗಳೂರಿನಲ್ಲಿ ೧೯೭೮ ರಲ್ಲಿ ಸಮಾವೇಶಗೊಂಡ ೫೧ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಲಕ್ಷ್ಮೀಶ :<br>ನಡುಗನ್ನಡದ ಪ್ರಸಿದ್ಧ ಕವಿಯಾದ ಲಕ್ಷ್ಮೀಶನು ಕ್ರಿ.ಶ. ೧೫೫೦ ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರಿನಲ್ಲಿ ಜನಿಸಿದನು. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. 'ಜೈಮಿನಿಭಾರತ' ವೆಂಬ ಪ್ರಸಿದ್ಧ ಕಾವ್ಯದ ಕರ್ತೃ. ಲಕ್ಷ್ಮೀಶ ಕವಿಗೆ ಉಪಮಾಲೋಲ, ಕರ್ಣಾಟಕವಿಚೂತವನಚೈತ್ರ ಎಂಬ ಬಿರುದುಗಳಿವೆ. | |
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ಕೊರಳ ಸೆರೆ ಹಿಗ್ಗಿದವು ದೃಗುಜಲ<br>ಉರವಣಿಸಿ ಕಡು ನೊಂದನಕಟಾ<br>ಕುರುಪತಿಗೆ ಕೇಡಾದುದೆಂದುನು ತನ್ನ ಮನದೊಳಗೆ<br>ಹರಿಯ ಹಗೆ ಹೊಗೆದೋರದುರುಹದೆ<br>ಬರಿದೆ ಹೋಹುದೆ ತನ್ನ ವಂಶವ<br>ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ<br>**ಅಥವಾ**<br>ಮಾರಿಗೌತಣವಾಯ್ತು ನಾಳಿನ<br>ಭಾರತವು ಚತುರಂಗ ಬಲದಲಿ<br>ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು<br>ತೀರಿಸಿಯೆ ಪತಿಯವಸರಕ್ಕೆ ಶ<br>ರೀರವನು ನೂಕುವೆನು ನಿನ್ನಯ<br>ವೀರರೈವರ ನೋಯಿಸೆನು ರಾಜೀವಸಖನಾಣೆ | 1 × 4 = 4 |
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ವರಕವಿ ಬೇಂದ್ರೆಯವರು ನವೋದಯ ಕಾಲ ಘಟ್ಟದಲ್ಲಿ ಬರೆದ ಕವನಗಳಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ ?' ಎಂಬುದು ಪ್ರಸಿದ್ಧ ಕವನವಾಗಿದೆ. ಇದರಲ್ಲಿ ಕಾಲವನ್ನು ಹಕ್ಕಿಗೆ ಸಾಂಕೇತಿಸಿ, ಕಾಲದ ಮಹತ್ವವನ್ನು ಬಹು ಮನೋಜ್ಞವಾಗಿ, ಮಾರ್ಮಿಕವಾಗಿ ಪ್ರತಿಮಾರೂಪದಲ್ಲಿ ಪ್ರಸ್ತುತಪಡಿಸುತ್ತಾರೆ. ಚಲನಶೀಲತೆ ಎಂಬುದು ಬದುಕಿನ ಜೀವಂತಿಕೆಯ ಗುಣವಾಗಿದೆ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ನಡೆದ ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತದೆ. ಅನೇಕ ಸಾರ್ವಭೌಮರು ಆಳಿದ ರಾಜ್ಯ ಸಾಮ್ರಾಜ್ಯಗಳು ಮುಳುಗುವ ತೇಲುವ ಕಾರ್ಯದಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭಾಗಿಯಾಗಿವೆ. ಯುಗಯುಗಗಳನ್ನು ದಾಟಿ, ಹಳೆಯ ಜಾಡ್ಯ, ಮೌಢ್ಯತೆಗಳನ್ನು ತೊಡೆದು ಹಲವರ ಹಣೆ ಬರಹವನ್ನು ನಿರ್ಧರಿಸಿ, ಒರೆಸಿ ಹೊಸ ಪರಿವರ್ತನೆಗೆ ನಾಂದಿ ಹಾಡಿದೆ. ವೈಚಾರಿಕತೆ, ಪ್ರಗತಿಪರ ಚಿಂತನೆ ಮೈದೋರಿದೆ. ತನ್ಮೂಲಕ ಹಲವು ಚೇತನಗಳಲ್ಲಿ ನವ ಚೈತನ್ಯವನ್ನು ತುಂಬುವುದರ ಮೂಲಕ, ನವೋದಯ, ಚಿಂತನಶೀಲ ಚಟುವಟಿಕೆಗಳಿಗೆ ದಾರಿ ಮಾಡಿ ಕೊಟ್ಟಿದೆ. ಮುಂದಿನ ಈ ಜಗತ್ತಿನ ಆಧಾರ ಸ್ತಂಭಗಳೆನಿಸಿರುವ ನವಯುವಕರು ಮತ್ತು ಹಸು ಮಕ್ಕಳಿಗೆ ಶುಭವನ್ನು ಹಾರೈಸುತ್ತಾ, ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ ಯುಗಗಳೇ ಉರುಳಿ ಹೊಸತನಕ್ಕೆ ತೆರೆದುಕೊಳ್ಳುವ ಸಂಕೇತವೂ ಆಗಿದೆ ಎಂಬುದೇ ಪ್ರಸ್ತುತ ಪದ್ಯಭಾಗದ ಮೌಲ್ಯವಾಗಿದೆ. | |
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | $2 \times 4 = 8$ |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | *ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಗೊರೂರರು ಪರಿಹರಿಸಿಕೊಂಡದ್ದು :* | |
| | ಅಮೆರಿಕದಲ್ಲಿ ಗೊರೂರರು ಮಗಳ ಮನೆಯ ಅಡುಗೆಮನೆಯಲ್ಲಿ ಉಂಟಾದ ಕೊಂಬಿನಂತಹ ಶಬ್ಧದಿಂದ ಗೊರೂರು ದಂಪತಿಗಳಿಗೆ ದಿಗಿಲಾಯಿತು. ಆ ವಿದ್ಯುತ್ ಒಲೆಗಳ ಸ್ವಿಚ್ ಜೋಡಣೆ ಹೊಸ ತರಹ, ಅವುಗಳ ಮೇಲಿನ ಅಸಂಖ್ಯಾತ ಅಂಕಿ ಗೆರೆ ಮತ್ತು ಬಣ್ಣಗಳು ಯಾವುದನ್ನು ಮುಟ್ಟಿದರೆ ಏನು ಅನಾಹುತ ಸಂಭವಿಸುವುದೋ ಎಂಬ ಆತಂಕ. ಮನೆಯೇ ಬೆಂಕಿಗೆ ಆಹುತಿಯಾಗುವುದೋ ಎಂಬ ಭಯದಿಂದ ಅರಿತವರೊಬ್ಬರನ್ನು ಕರೆದು ತರಲು ಗೊರೂರರು ಶಾಲೆಯತ್ತ ಧಾವಿಸಿ ಅಲ್ಲಿನ ಉಪಾಧ್ಯಾಯರಿಗೆ ನಮ್ಮ ಮನೆಯ ವಿದ್ಯುತ್ ಒಲೆ ಏನೋ ತೊಂದರೆ ಕೊಡುತ್ತಿದೆ. ನನಗೆ ಅಭ್ಯಾಸವಿಲ್ಲ. ನಿಮ್ಮ ವಿದ್ಯಾರ್ಥಿಗಳ ಪೈಕಿ ಈ ವಿಷಯ ಗೊತ್ತಿರುವವರು ಯಾರಾದರೂ ಬಂದು ಒಂದು ಗಳಿಗೆ ನೋಡಿ ಸರಿಪಡಿಸುವರೇ ? ಎಂದು ಕೇಳಿದರು. ಉಪಾಧ್ಯಾಯರು ಹುಡುಗರ ಪೈಕಿ ಬಲಿಷ್ಠನಾದವನನ್ನು ಕರೆದು "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ" ಎಂದರು. ಆ ಹುಡುಗ ಗೊರೂರರ ಜೊತೆ ಹೊರಟು ಮನೆಗೆ ಬಂದು, ನೇರವಾಗಿ ಅಡುಗೆಮನೆಗೆ ಬಂದು ಸುತ್ತ ನೋಡಿ, ವಿದ್ಯುತ್ ಒಲೆಗೆ ಸಂಬಂಧಿಸಿದ ಒಂದು ಮುಳ್ಳಿಗೆ ಆ ಧ್ವನಿ ಸಂಬಂಧಿಸಿದ್ದೆಂದು ಅವನಿಗೆ ತಿಳಿಯಿತು. ಅದರ ಸ್ವಿಚ್ಚನ್ನು ಪತ್ತೆ ಮಾಡಿ ಅವನು ಅದನ್ನು ಅಮುಕಿದನು. ಕೂಡಲೇ ಧ್ವನಿ ನಿಂತಿತು. ಹೀಗೆ ಗೊರೂರರು ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಪರಿಹರಿಸಿಕೊಂಡರು. | |
| | **ಅಥವಾ** | |
| | *ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಪರಿಚಯಿಸಿದ್ದು ಹೀಗೆ :* | |
| | ಗೊರೂರರು ಅಮೆರಿಕದ ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳಿಗೆ ಗಾಂಧೀಜಿಯವರ ಪರಿಚಯ ಮಾಡಿಕೊಡುತ್ತ 'ನಾನು ಗಾಂಧೀ ಭಾರತದಲ್ಲಿ ಜನಿಸಿದವನು. ಭಾರತದ ಹವೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತುಂಬಾ ಹಿತಕರವಾಗಿರುತ್ತದೆ. ಅತಿ ಕಡಿಮೆ ಬಟ್ಟೆಯಿಂದಲೇ ಜೀವಿಸಬಹುದು. ಈ ಬಟ್ಟೆಯನ್ನು ಪ್ರಚಾರಕ್ಕೆ ತಂದವರು ಗಾಂಧೀಜಿ. ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ ಇದಕ್ಕೆ ಯಾವುದೇ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲ ಎಂದರು. ಕೈಯಿಂದಲೇ ಮಾಡಿದ್ದು ಎಂದ ಕೂಡಲೇ ಎಲ್ಲಾ ಉಪಾಧ್ಯಾಯರೂ ಹುಡುಗರೂ ಬಂದು ಗೊರೂರರ ಬಟ್ಟೆಯನ್ನು ಮುಟ್ಟಿ ನೋಡಿದರು. ಒಬ್ಬ ಉಪಾಧ್ಯಾಯರಂತೂ ಕೈಯಿಂದ ಇದನ್ನು ಮಾಡುವುದು ಹೇಗೋ! ಎಂದು ಗೊರೂರರ ಮಾತಿನಲ್ಲಿ ಅಪನಂಬಿಕೆಯನ್ನು ವ್ಯಕ್ತಪಡಿಸಿದರು. ಆಗ ಗೊರೂರರು ರಾಟೆಯಿಂದ (ಚರಕದಿಂದ) ನೂಲುವುದು ಮಗ್ಗದಿಂದ ನೇಯುವುದು ಎಂದು ವಿವರಿಸುತ್ತ ಗಾಂಧೀಜಿಯವರ ಬಗ್ಗೆ ಹಾಗೂ ಖಾದೀ ಬಟ್ಟೆಯ ಮಹತ್ವವನ್ನು ಕುರಿತು ಅಭಿಮಾನದಿಂದ ವಿವರಿಸಿದರು. | |
| 44. | *ಧೃತರಾಷ್ಟ್ರನು ಸಂಧಿ ಮಾಡಿಕೊಳ್ಳಲು ದುರ್ಯೋಧನನಿಗೆ ಹೇಳುವ ಕಾರಣಗಳು :* <br><br> 'ಪುತ್ರ ಶೋಕಂ ನಿರಂತರಂ' ಎಂಬ ಮಾತಿದೆ. ತಂದೆ–ತಾಯಿ ಮಕ್ಕಳ ಸಂಬಂಧ ಅಂತಃಕರಣ ಮಿಡಿಯುವಂತಹುದು. ಯುದ್ಧ ಅನಿವಾರ್ಯವಾದರೂ ಮಕ್ಕಳನ್ನು ಕಳೆದುಕೊಂಡ ದುಃಖ ತೀವ್ರವಾದುದು. ತೊಂಬತೊಂಬತ್ತು ಮಕ್ಕಳನ್ನು ಕಳೆದುಕೊಂಡ ವೃದ್ಧ ದಂಪತಿಗಳಾದ ಧೃತರಾಷ್ಟ್ರ ಮತ್ತು ಗಾಂಧಾರಿ ರಣಾಂಗಣಕ್ಕೆ ಬಂದು ಉಳಿದಿರುವ ದುರ್ಯೋಧನನೊಬ್ಬನಾದರೂ ಬದುಕಲಿ ಎಂಬ ಭಾವನೆಯಿಂದ ದುರ್ಯೋಧನನ ಬಳಿ ಬಂದು ಪ್ರೀತಿಯಿಂದ ಅಪ್ಪಿ ಮುದ್ದಾಡುತ್ತ, ಹರಸುತ್ತ, ಆನಂದಭಾಷ್ಪವನ್ನು ಸುರಿಸುತ್ತ. ಮಗನೇ ನಮಗೂ ಪಾಂಡುವಿಗೂ ಯಾವುದೇ ಭೇದವಿಲ್ಲ ಹೊಂದಾಣಿಕೆಯಿಂದ ರಾಜ್ಯವನ್ನು ಹಂಚಿಕೊಂಡು ರಾಜ್ಯಭಾರ ಮಾಡಬಹುದು. ಈ ಯುದ್ಧವು ನಿನ್ನಿಂದಲೇ ಆಯಿತೆಂದರೆ ನೀನು ಕೋಪಿಸಿಕೊಳ್ಳುತ್ತೀಯೆ, ಗಂಗೆಯ ಹಿರಿಯ ಮಗನಾದ ಭೀಷ್ಮ, ಘಟ ಸಂಭೂತನಾದ ದ್ರೋಣ, ನಿನ್ನ ಪ್ರೀತಿಯ ಗೆಳೆಯ ಕರ್ಣ ಇವರಿಂದಲೇ ಗೆಲ್ಲಲು ಅಸಾಧ್ಯವಾದ ಅರ್ಜುನನನ್ನು ಕೋಪದಿಂದ ಎದುರಿಸಿ ಗೆಲ್ಲುವವರು ನಮ್ಮಲ್ಲಿ ಯಾರಿದ್ದಾರೆ ? ಆದ್ದರಿಂದ ಸಂಧಿಯನ್ನು ಮಾಡಿಕೊಳ್ಳುವುದು ಉಚಿತವೆನ್ನುತ್ತಾನೆ. ಶತ್ರುತ್ವಕ್ಕೆ ಮತ್ತು ಮಿತ್ರುತ್ವಕ್ಕೆ ಬೇರೆ ಬೇರೆ ಸ್ಥಳವೆಂಬುದಿದೆಯೇ ? ಇವೆರಡೂ ನಾವು ಕೈಗೊಳ್ಳುವ ಕಾರ್ಯದಿಂದಲೇ ಉಂಟಾಗುತ್ತವೆ. ಈ ವಿಷಯವನ್ನು ದಂಡನೀತಿ ಶಾಸ್ತ್ರದಲ್ಲಿ ಹೇಳಿಲ್ಲವೆ ? 'ಮಗನೇ, ಯೋಚಿಸು! ನಮಗೆ ನೀನೊಬ್ಬನಿದ್ದರೆ ಎಲ್ಲರೂ ಇದ್ದಂತೆಯೇ, ನಮಗೆ ಮನಸ್ಸಿನಲ್ಲಿ ಯಾವುದೇ ಭಯವಿಲ್ಲ. ಹೇಗೆಂದರೆ' ಹಗಲಿನಲ್ಲಿ ಸೂರ್ಯನಿರುವಾಗ ಸಾವಿರಾರು ದೀಪಗಳು ಉರಿದರೇನು ? ನಂದಿದರೇನು ? ಪಾಂಡವರು ನಾನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೇಳಿದಂತೆಯೇ ಕೇಳುತ್ತಾರೆ. ಪ್ರತಿಯಾಗಿ ನುಡಿಯುವವರಲ್ಲ. ನೀನು ಹೇಳಿದಂತೆಯೇ ಕೇಳುವ ಹಾಗೆ ಪಾಂಡವರನ್ನು ಒಪ್ಪಿಸುತ್ತೇನೆ. ದಯಮಾಡಿ ಸಂಧಿಗೆ ಒಪ್ಪಿಕೋ ನಿನಗೆ ಕೈಮುಗಿದು ಬೇಡಿಕೊಳ್ಳುತ್ತೇನೆ ಎನ್ನುತ್ತಾನೆ ಧೃತರಾಷ್ಟ್ರ. | |
| | ***ಅಥವಾ*** | |
| | *ದುರ್ಯೋಧನನ ತಂದೆ–ತಾಯಿಯರು ಸಂಧಿಗಾಗಿ ಪ್ರಾರ್ಥಿಸಿದ ರೀತಿ :* | |
| | ಧೃತರಾಷ್ಟ್ರ ಮತ್ತು ಗಾಂಧಾರಿಯರೀರ್ವರೂ ರಣಾಂಗಣಕ್ಕೆ ಭೇಟಿ ಕೊಟ್ಟು, ದುರ್ಯೋಧನನನ್ನು ಅಪ್ಪಿ ಮುದ್ದಾಡುತ್ತ ಪ್ರೀತಿಯಿಂದ ಆನಂದಭಾಷ್ಪವನ್ನು ಹರಿಸುತ್ತ ದುರ್ಯೋಧನನ್ನು ಕುರಿತು ಹೀಗೆ ಹೇಳುತ್ತಾರೆ. “ನನಗೂ ಪಾಂಡುವಿಗೂ ಯಾವುದೇ ಭೇದವಿಲ್ಲ. ಹೊಂದಾಣಿಕೆಯಿಂದ ರಾಜ್ಯವನ್ನು ಹಂಚಿಕೊಂಡು ರಾಜ್ಯಭಾರ ಮಾಡಬಹುದು. ಈ ಯುದ್ಧವು ನಿನ್ನಿಂದಲೇ ಆಯಿತೆಂದರೆ ನೀನು ಕೋಪಿಸಿಕೊಳ್ಳುತ್ತೀಯೆ, ಗಂಗೆಯ ಹಿರಿಯ ಮಗನಾದ ಭೀಷ್ಮ, ಘಟ ಸಂಭೂತನಾದ ದ್ರೋಣ, ನಿನ್ನ ಪ್ರೀತಿಯ ಗೆಳೆಯ ಕರ್ಣ ಇವರಿಂದಲೇ ಗೆಲ್ಲಲು ಅಸಾಧ್ಯವಾದ ಅರ್ಜುನನನ್ನು ಕೋಪದಿಂದ ಎದುರಿಸಿ ಗೆಲ್ಲುವವರು ನಮ್ಮಲ್ಲಿ ಯಾರಿದ್ದಾರೆ ? ಆದ್ದರಿಂದ ಸಂಧಿಯನ್ನು ಮಾಡಿಕೊಳ್ಳುವುದು ಉಚಿತವೆನ್ನುತ್ತಾನೆ. ಶತ್ರುತ್ವಕ್ಕೆ ಮತ್ತು ಮಿತ್ರತ್ವಕ್ಕೆ ಬೇರೆ ಬೇರೆ ಸ್ಥಳವೆಂಬುದಿದೆಯೇ ? ಇವೆರಡೂ ನಾವು ಕೈಗೊಳ್ಳುವ ಕಾರ್ಯದಿಂದಲೇ ಉಂಟಾಗುತ್ತವೆಯಲ್ಲವೆ ? ಈ ವಿಷಯವನ್ನು ದಂಡನೀತಿ ಶಾಸ್ತ್ರದಲ್ಲಿ ಹೇಳಿಲ್ಲವೆ ? ಮಗನೇ, ಯೋಚಿಸು! ನಮಗೆ ನೀನೊಬ್ಬನಿದ್ದರೆ ಸಾಕು. ನಮ್ಮ ಮನಸ್ಸಿನಲ್ಲಿ ಯಾವುದೇ ಅಳಲಿಲ್ಲ, ದುಃಖವಿಲ್ಲ ಹೇಗೆಂದರೆ ಹಗಲಿನಲ್ಲಿ ಸೂರ್ಯನಿರುವಾಗ ಸಾವಿರಾರು ದೀಪಗಳು ಉರಿದರೇನು ? ನಂದಿದರೇನು ? ಪಾಂಡವರು ನಾನು ಹೇಳಿದಂತೆಯೇ ಕೇಳುತ್ತಾರೆ. ನಮ್ಮ ಮಾತನ್ನು ಎಂದಿಗೂ ಮೀರುವವರಲ್ಲ. ನೀನು ಹೇಳಿದಂತೆಯೇ ಕೇಳುವಂತೆ ಅವರನ್ನು ಒಪ್ಪಿಸುತ್ತೇನೆ. ನೀನು ಸಂಧಿಗೆ ಒಪ್ಪಿಕೋ ನಿನಗೆ ಕೈಮುಗಿದು ಬೇಡಿಕೊಳ್ಳುತ್ತೇನೆ ಎಂದ ಧೃತರಾಷ್ಟ್ರನ ಮಾತಿಗೆ ಬೆಂಬಲವಾಗಿ ಗಾಂಧಾರಿಯು ಹೀಗೆ ನುಡಿಯುತ್ತಾಳೆ. ಕುರುಕುಲವೆಂಬ ನಂದನವನಕ್ಕೆ ಮದವೇರಿದ ಪವನ ನಂದನನೆಂಬ ಮದಗಜವು ನುಗ್ಗಲು ವನವೆಲ್ಲವೂ ಧ್ವಂಸವಾಗಿ, ಪುಣ್ಯವಶದಿಂದ ಒಂದು ದೊಡ್ಡ ಮರ ಉಳಿಯುವಂತೆ ನೀನುಳಿದಿದ್ದೀಯೆ! ಇನ್ನು ಪಾಂಡವರೊಡನೆ ಕೋಪದಿಂದ ಯುದ್ಧ ಮಾಡುವ ಶೂರರಾರೂ ಇಲ್ಲ. ಮುದುಕರು, ಅಶಕ್ತರು ಕುರುಡರೂ ಎಂದು ನಮ್ಮನ್ನು ತಿರಸ್ಕರಿಸದೆ ನಮ್ಮ ಮಾತನ್ನು ಕೇಳು ಮಗನೇ, ನಿಮ್ಮ ತಂದೆಯ ಮಾತಿನಂತೆ ಸಂಧಿಯನ್ನು ಮಾಡಿಕೋ ಎಂದು ಪ್ರಾರ್ಥಿಸುತ್ತಾಳೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 2 × 2 = 4 |
| | ಅ) "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ವೆಂಕಟರಾಯರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸುವ ಸಲುವಾಗಿ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಗೆ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳನ್ನು ಸ್ವತಃ ತಾವೇ ಸ್ಥಾಪಿಸುವುದರ ಮೂಲಕ ಮಾದರಿಯಾದರು. | |
| | ಆ) ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನು, ಸ್ವದೇಶ ಸಂಸ್ಕೃತಿಯನ್ನು ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳುವಳಿ'ಯಲ್ಲಿ ದುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು. | |
| | **ವಿಭಾಗ – 'ಬಿ'** | |
| | **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 46. | (ಎ) ಲೋಪ ಸಂಧಿ | |
| 47. | (ಬಿ) ಅರ್ಧವಿರಾಮ | |
| 48. | (ಸಿ) ಪರಧನ | |
| 49. | (ಡಿ) ತದ್ಧಿತಾಂತಭಾವನಾಮ | |
| 50. | (ಎ) ಹಲವು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 51. | (ಬಿ) ಅವಧಾರಣಾರ್ಥಕ | |
| 52. | (ಸಿ) ತಿಂದಾನು | |
| 53. | (ಡಿ) ಅಪಾದಾನ | |
| 54. | (ಎ) ಬಾಳುವಿಕೆ | |
| 55. | (ಸಿ) ಮಿಶ್ರ ವಾಕ್ಯ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ದ್ವಿರುಕ್ತಿ | |
| 57. | ಹಾವು | |
| 58. | ಕೊಡಲಿ | |
| 59. | ಪೋರ್ಚ್‌ಗೀಸ್ | |
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

೫ | ೫ | ೫ | ೫
U U — U | — U — | U U U U U | U U U U U
ತೆಗೆದುತ್ತ | ರೀಯಮಂ | ಮುರಿದು ಕುದು | ರೆಯ ಗಳಕೆ | – ೨೦

೫ | ೫ | ೫ | ೫
U U U U U | — U U U | — — U | U U U —
ಬಿಗಿದು ಕದ | ಳೀದ್ರುಮಕೆ | ಕಟ್ಟಲ್ಕೆ | ಮುನಿಸುತರ್ | – ೨೦

೫ | ೫ | ೫ | ೫ | ೫ | ೫ | ಗು
U U U U U | — U — | U U U U U | — U — | U U U U U | — U U U | —
ಮಿಗೆ ನಡುಗಿ | ಬೇಡಬೇ | ಡರಸುಗಳ | ವಾಜಿಯಂ | ಬಿಡು ಬಡಿವ | ರೆಮ್ಮನೆನ | ಲು – ೨೦

ಇದು ಮಾತ್ರಾ ಗಣ ಛಂದಸ್ಸಿನ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ.

**ಅಥವಾ**

ನ | ಜ | ಭ | ಜ | ಜ | ಜ | ರ
U U U | U — U | — U U | U — U | U — U | U — U | — U —
ಕುರುಡ | ರುಮೆನ್ನ | ದೆಮ್ಮ ನು | ಡಿಗೇಳ್ ಮ | ಗನೇ ಬ | ಗೆ ತಂದೆ | ಗಿಂಬುಕೆಯ್

ಇದು ಅಕ್ಷರ ಗಣ ಛಂದಸ್ಸಿನ ಚಂಪಕಮಾಲಾ ವೃತ್ತದ ಲಕ್ಷ್ಯವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ನಾಲ್ಕು ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

*'ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು'*

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

*ಸಮನ್ವಯ* : ಉಪಮೇಯ : ನುಡಿ (ಮಾತು)

ಉಪಮಾನ : ಸ್ಫಟಿಕದ ಶಲಾಕೆ

ವಾಚಕ ಪದ : ಅಂತೆ

ಸಮಾನ ಧರ್ಮ – (ಲುಪ್ತವಾಗಿದೆ) ಗಟ್ಟಿತನ, ಪಾರದರ್ಶಕತ್ವ

ಇಲ್ಲಿ ಉಪಮೇಯವಾದ ನುಡಿಯನ್ನು (ಮಾತನ್ನು) ಉಪಮಾನವಾದ ಸ್ಫಟಿಕದ ಶಲಾಕೆಗೆ ಹೋಲಿಸಲಾಗಿದೆ. 'ಅಂತೆ' ಎಂಬ ವಾಚಕ ಪದವಿದ್ದು, ಗಟ್ಟಿತನ ಪಾರದರ್ಶಕತ್ವವೆಂಬ ಸಮಾನಧರ್ಮವು ಲುಪ್ತವಾಗಿರುವುದರಿಂದ ಇದು ಸಮಾನಧರ್ಮ ಲುಪ್ತೋಪಮಾಲಂಕಾರ (ಉಪಮಾಲಂಕಾರ)ದ ಲಕ್ಷ್ಯವಾಗಿದೆ.

***ಅಥವಾ***

*"ಅಳ್ಳಿರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ"*

*ಅಲಂಕಾರದ ಹೆಸರು* : ರೂಪಕಾಲಂಕಾರ

*ಲಕ್ಷಣ* : ಅತಿ ಸಾಮ್ಯತೆಯಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ಅದು ರೂಪಕ ಅಲಂಕಾರವೆನಿಸುತ್ತದೆ.

*ಸಮನ್ವಯ :*

*ಉಪಮೇಯ* : ಒಡಲ ಬೇಗೆ

*ಉಪಮಾನ* : ಬೆಂಕಿಯುರಿ

ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿಯ ಉರಿಗೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |
| | *ಖಾಸಗಿ / ಅಕ್ಕಳಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |